

ಎತ್ತರದ ಮಿತ್ರೆ ಶಿಖರ

ಹತ್ತಿಳಿಯುತ್ತಿದ್ದೆವು. ಸೌಂಡಿಗೆ ತಲುಪುವ ಈ ಕೊನೆಯ ಭಾಗದ ಮಾರ್ಗ ನಿರ್ಮಾಣ ಎಂತಹ ಸವಾಲಿನದಾಗಿತ್ತು ಎಂದು ಗೈಡ್ ಶತಮಾನದ ಹಿಂದಿನ ಕಥೆ ಹೇಳತೊಡಗಿದರು. ಸಾವಿರಾರು ಅಡಿ ಎತ್ತರದ ಪರ್ವತಗಳು ಅಡ್ಡಗೋಡೆಯಂತೆ ನಿಂತ ಕಾರಣ ಮಿಲ್‌ಫೋರ್ಡನ್ನು ತಲುಪುವುದೇ ಅಸಾಧ್ಯವೆನ್ನುವಂತಾಗಿತ್ತು. 1889ರಲ್ಲಿ ವಿಲಿಯಂ ಹೋಮರ್ ಎಂಬಾತನಿಗೆ ಲಾಳಾಕಾರದ ಪರ್ವತದ ಕಣಿವೆಯಿರುವಲ್ಲಿ ಸುರಂಗ ಕೊರೆದರೆ ಹ್ಯಾಲಿಫೋರ್ಡ್ ನದಿ ಕಣಿವೆಯಿಂದ ಕ್ಲೆಡ್ಡಾ ನದಿ ಕಣಿವೆ ತಲುಪಿ ಮಿಲ್‌ಫೋರ್ಡ್ ಸೌಂಡ್ ಮುಟ್ಟಬಹುದೆಂದು ಅಂದಾಜಾಯಿತು. ಅದು ಹತ್ತಿರದ, ನೇರ ಮಾರ್ಗವೇನೋ ಹೌದು, ಆದರೆ ಸುರಂಗ ಕೊರೆಯುವುದು ಹೇಗೆ? ವರ್ಷದ ಅರ್ಧ ದಿನಗಳಲ್ಲಿ ಸೂರ್ಯನ ಬೆಳಕೇ ಬೀಳದಷ್ಟು ಎತ್ತರೆತ್ತರದ ಪರ್ವತಗಳ ನಡುವಿನ ಪ್ರದೇಶದಲ್ಲಿ ಸುರಂಗ ಕೊರೆಯುವುದು ಸುಲಭವಿರಲಿಲ್ಲ. ಮೊದಲಿಗೆ ಟೆಂಟುಗಳಲ್ಲಿ ನೆಲೆಸಿ ಹಾರೆ ಪಿಕಾಸಿ ಡ್ರಿಲ್ಲುಗಳ ನೆರವಿನಿಂದ ಕೆಲಸ ಆರಂಭಿಸಿದರು. ಏಳುಬೀಳಿನೊಡನೆ ಕೆಲಸ ಸಾಗುತ್ತ ಹೋಯಿತು. ನಡೆಯಿತು, ನಿಂತಿತು, ಮತ್ತೆ ಆರಂಭವಾಯಿತು.

ಬಂಡೆ ಒಡೆದ ಹಾಗೂ ಹಿಮ ಕರಗಿದ ನೀರು ತುಂಬುತ್ತಿತ್ತು. ಕೊನೆಗೆ ಪಕ್ಕದಲ್ಲೇ ಹರಿವ ಹಾಲಿಫೋರ್ಡ್ ನದಿಗೆ ಸಣ್ಣ ಕಟ್ಟೆ ಕಟ್ಟಿ, ವಿದ್ಯುತ್ ತಯಾರಿಸಿ ಗಂಟೆಗೆ 40 ಸಾವಿರ ಲೀಟರ್ ನೀರು ಖಾಲಿ ಮಾಡುತ್ತ ಸುರಂಗ, ರಸ್ತೆಯ ಕೆಲಸ ನಡೆಸಿದರು. ಭೂ ಕುಸಿತಕ್ಕೆ ಕೆಲವರು ಬಲಿಯಾದರು. ಮತ್ತೊಂದು ಭೂಕುಸಿತದಲ್ಲಿ ತೋಡಿದ ಸುರಂಗ ಅರ್ಧಕ್ಕರ್ಧ ಮುಚ್ಚಿ ಹೋಯಿತು. ಅಂತೂ 19 ವರ್ಷಗಳ ಬಳಿಕ 1940ರ ವೇಳೆಗೆ ಸುರಂಗ ಮತ್ತೊಂದು ತುದಿ ತಲುಪಿಯೇ ಬಿಟ್ಟಿತು. ಮಹಾಯುದ್ಧದ ಕಾಲವಾದ್ದರಿಂದ ವಿಳಂಬಗೊಂಡು 1953ರಲ್ಲಿ ಸಂಚಾರಕ್ಕೆ ತೆರೆಯಲ್ಪಟ್ಟಿತು. ಇವತ್ತಿಗೂ 1.2 ಕಿ.ಮೀ. ಉದ್ದದ ಆ ಹೋಮರ್ ಸುರಂಗದಲ್ಲಿಯೇ ಎಲ್ಲರೂ ಹಾದು ಹೋಗಬೇಕು.

ಸುರಂಗವು ಏಕಮುಖ ಸಂಚಾರ ಹೊಂದಿದೆ. ಎದುರುಬದುರಾದರೆ ಎರಡು ಕಾರುಗಳು ಚಲಿಸಬಹುದು, ಆದರೆ ಎರಡು ಬಸ್ಸುಗಳು ಚಲಿಸಲಾರವು. ಸಂಜೆ ಆರರಿಂದ ಬೆಳಿಗ್ಗೆ ಒಂಬತ್ತರವರೆಗೆ ಮುಚ್ಚಿರುತ್ತದೆ. ಸುರಂಗ ಅಗಲ ಮಾಡುವ ಪ್ರಯತ್ನಗಳು ನಡೆದರೂ ಅದು ಸುರಕ್ಷಿತವಲ್ಲ ಮತ್ತು ಅತ್ಯಂತ ಖರ್ಚಿನ ಬಾಬತ್ತು ಎಂದು ಕೈ ಬಿಟ್ಟಿದ್ದಾರೆ.

ನಮ್ಮ ಗೈಡ್ ಹೇಳುತ್ತಿದ್ದ ಸುರಂಗದ ಕಥೆ ಕೇಳುತ್ತ ಕೇಳುತ್ತ ಅದರ ಬಾಯಿಯ ಬಳಿ ಬಸ್ಸು ನಿಂತಿತು. ಟ್ರಾಫಿಕ್ ಹೆಚ್ಚಿತ್ತು. ಈ ಕಡೆಯಿಂದ ಹೊರಟವರು ಆಚೆ ತಲುಪಿದ ಮೇಲೆಯೇ ಮತ್ತೊಂದು ತಂಡ ಆಚೆಯಿಂದ ಈಚೆ ಬರುತ್ತಿತ್ತು. ಏಕಮುಖ ಸಂಚಾರವನ್ನು ಸಿಗ್ನಲ್‌ಗಳೇ ನಿರ್ವಹಿಸುತ್ತಿದ್ದವು. ನಾವು ಹೆಚ್ಚುಕಡಿಮೆ ಒಂದು ಗಂಟೆ ಕಾಲ ಕಾದೆವು. ಹೊರಗಣದ ಸೌಂದರ್ಯವನ್ನು ಕಿಟಕಿಯಿಂದಲೇ ಕಣ್ತುಂಬಿಕೊಳ್ಳುತ್ತಿದ್ದೆವು. ಸಂಪೂರ್ಣ ತಲೆಯೆತ್ತಿ ನೋಡಿದರೂ ತುದಿ ಕಾಣದಷ್ಟು ಎತ್ತರದ ಪರ್ವತಗಳಿಂದ ಜಲಧಾರೆ ಬೀಳುತ್ತಿತ್ತು. ಮಳೆ ಒಂದೇ ಸಮ ಸುರಿಯುತ್ತಿತ್ತು. ಅಲ್ಲೇನಾದರೂ ಭೂ ಕುಸಿತ ಸಂಭವಿಸಿದರೆ, ಭಾರೀ ಹಿಮಪಾತವಾದರೆ ನಾವು ಇದ್ದಲ್ಲೇ ಇಲ್ಲವಾಗುತ್ತೇವೆ ಎಂದು ಗೈಡ್ ಹೇಳುವಾಗ ಕೆಲವರು ಹೌದೇ ಎಂದು ಭಯಪಟ್ಟರು. ನನ್ನಾಳದಲ್ಲಿ ನೆಲೆಗೊಂಡಿದ್ದ ವಿಶಿಷ್ಟ ಶಾಂತಿಯು, ಹಾಗಾಗುವುದಾದರೆ ಆಗಲಿ; ಇಂಥ ಪ್ರಕೃತಿಯಲ್ಲಿ ಲೀನವಾಗುವುದಕ್ಕಿಂತ ಹೆಚ್ಚಿನ ಸಂತಸ ಬೇರೆ ಇನ್ನೇನಿದೆ ಎಂದು ಹೇಳುತ್ತಿತ್ತು.

## ಪ್ರಕೃತಿಯ ಮಡಿಲು ಪಿಯೊಪಿಯೊತಾಹಿ

ಕೊನೆಗಂತೂ ಬಿಸಿಲುಮಳೆ ಬೀಳುತ್ತಿರುವ ಹೊತ್ತಿಗೆ ಪಿಯೊಪಿಯೊತಾಹಿ ತಲುಪಿದೆವು. ಅನುಭವದಿಂದ ಮಾತ್ರ ವೇದ್ಯವಾಗುವ ಆ ಅಪರಿಮಿತಾನಂದವನ್ನು ಏನೆಂದು ವರ್ಣಿಸುವುದು? ಹಿಂದೆಂದೂ ಕಾಣದಂತಹ ಚೆಲುವಿನ ಪ್ರಕೃತಿಯ ಮಡಿಲಿನಲ್ಲಿರುವ ಆನಂದವೋ, ಉದ್ವೇಗವೋ, ಚಳಿಯೋ ಅಂತೂ ಒಳಗಿನಿಂದ ನಗು ಮತ್ತು ನಡುಕ ಎದ್ದೆದ್ದು ಬಂದು ಗದಗುಡುವಂತಾಗುತ್ತಿತ್ತು. ಎಷ್ಟು ಗಂಟೆಯೊಳಗೆ ಎಲ್ಲಿ ಬಂದು ಬಸ್ ಹತ್ತಬೇಕು ಎಂದು ತಿಳಿಸಿ ಗೈಡ್ ಹಿಂದೆ ಉಳಿದರು. ಮೂರಂತಸ್ತಿನ ಯಾಂತ್ರಿಕ ದೋಣಿಯಲ್ಲಿ ಸುರಕ್ಷತೆಯ ದಿರಿಸು ಧರಿಸಿ ಪಯಣ ಆರಂಭಿಸಿದೆವು.

ಈಗ ಬಿಸಿಲು ಈಗ ಮೋಡ. ನಡುನಡುವೆ ಮಳೆ. ಮೋಡದ ನಾಡಿನ ಬಾಗಿಲಿಗೆ ಕಮಾನು ಕಟ್ಟಿದ ಕಾಮನಬಿಲ್ಲು!

ವಿಶಾಲ ಕಣಿವೆ ತುಂಬಿದ ಜಲರಾಶಿ, ಎರಡೂ ಕಡೆ ನೀರಿನಿಂದ ಲಂಬವಾಗಿ ಮೇಲೆದ್ದು ಆಗಸ ಸೀಳುವಂತೆ ಕಾಣುವ ನಾಲ್ಕೈದು ಸಾವಿರ ಅಡಿ ಎತ್ತರದ ಪರ್ವತಗಳು. ಹೆಬ್ಬಂಡೆಗಳನ್ನೂ, ಅದರ ನಡುವೆ ಸುರಿಯುತ್ತಿರುವ ಜಲಪಾತಗಳನ್ನೂ, ನೆತ್ತಿ ಮೇಲೇ ಹಾದು ಹೋಗುವ ಹಿಂಜಿದ ಹತ್ತಿಯಂತಹ ಬಿಳಿ ಮೋಡಗಳನ್ನೂ ನೋಡುತ್ತ ಸಾಗಿದೆವು. ಒಂದು ಭಾರೀ ಜಲಪಾತ ದೂರದಿಂದ ಕಾಣಿಸತೊಡಗಿತು, ಕೇಳಿಸತೊಡಗಿತು. ಅದು ಸ್ಟರ್ಲಿಂಗ್ ಜಲಪಾತ. ಹತ್ತಿರ ಹೋಗುತ್ತ ಹೋಗುತ್ತ ಅರೆರೆ! ಜಲಪಾತದ ನೀರಿನಡಿಯೇ ನಮ್ಮ ಬೋಟು ಹೀಗೆ ಹೋಗಿ ಹಾಗೆ ಹೊರಬಂತು! ನಾವು ಒಳಗೆ ನಿಂತರೂ ಎರಚುವ ಹನಿಗಳು ತೋಯಿಸಿ ಗದಗುಡಿಸಿದವು. ರುದ್ರರಮಣೀಯತೆಯನ್ನು ಅನುಭವಿಸುವ ಚಪ್ಪಾಳೆ, ನಗು, ಕೂಗು, ಹಾಡು, ನರ್ತನ ದೋಣಿಯನ್ನು ತುಂಬಿಕೊಂಡಿತು.

ಒದಷ್ಟು ದೂರ ಹೋಗುವುದರಲ್ಲಿ ಅಗೋ ಅಲ್ಲಿ ದೂರದಲ್ಲಿ ಎವರೆಸ್ಟಿನಂತೆ ಕಾಣಿಸುವ ಹಿಮಾವೃತ ಭಾರೀ ಶಿಖರ ಕಣ್ಮುಂದೆ ಬಂತು. ಅದು ಮಿತ್ರೆ ಶಿಖರ. 1692 ಮೀಟರ್ ಎತ್ತರವಿದೆ. ಹಿಂಜಿದ ಮೋಡಗಳು ಶಿಖರದ ಸುತ್ತ ಕಣ್ಣಾಮುಚ್ಚಾಲೆಯಾಡುತ್ತಿದ್ದವು. ಕ್ಯಾಮೆರಾಗಳು ಪುರುಸೊತ್ತಿಲ್ಲದೆ ಕಂಡ ದೃಶ್ಯವನ್ನು ಚಿತ್ರವಾಗಿ ಒಳಗಿಳಿಸಿಕೊಳ್ಳಲು ಹೆಣಗುತ್ತಿದ್ದವು. ಅಷ್ಟು ದೂರ ಹೋಗುತ್ತಿದ್ದಂತೆ ಬಂಡೆಗಳ ಮೇಲೆ ಮೈ ಒಣಗಿಸಿಕೊಳ್ಳುತ್ತ ಮಲಗಿದ್ದ ಸೀಲ್‌ಗಳು ಕಂಡವು.

ಹೇಗೆ ಕಳೆಯಿತೋ ಕಾಲ! ಬೋಟ್ ರೈಡ್ ಮುಗಿದು ಹೋಯಿತು. ಎಷ್ಟು ಸಾಧ್ಯವೋ ಅಷ್ಟನ್ನು ಕಣ್ಮನಗಳಲ್ಲಿ ತುಂಬಿಕೊಳ್ಳುತ್ತ, ಚಣವೂ ವ್ಯರ್ಥವಾಗದಂತೆ ನೋಡಿದೆವು. ಮತ್ತೆಂದಾದರೂ ಈ ಚೆಲುವ ನಾಡಿಗೆ, ಶಾಂತಿ ಸೂಸುವ ಬೀಡಿಗೆ ಬರುವೆವೋ ಇಲ್ಲವೋ ಎಂಬ ಸಂಕಟದ ಮುಳ್ಳು ಆಡುತ್ತಿರಲು ಹಿಂತಿರುಗಿ ಹೊರಟೆವು.

ಎಲ್ಲವನ್ನು ಎಷ್ಟು ತುಂಬಿಕೊಂಡಿದ್ದೆವೆಂದರೆ ಹಿಂತಿರುಗಿ ಬರುವಾಗ ನಮ್ಮ ವಾಹನದೊಳಗೆ ಗಾಢ ನಿಶ್ಶಬ್ದ ಆವರಿಸಿತು. ಕಂಡದ್ದನ್ನು ಅರಗಿಸಿಕೊಳ್ಳಲು ಯತ್ನಿಸುತ್ತ ಸೀಟಿಗೊರಗಿ ಹೊರಗೆ ದಿಟ್ಟಿಸುತ್ತ ಪ್ರಶಾಂತವಾಗಿ ಕುಳಿತಿದ್ದೆವು. ನಮ್ಮ ಮಾರ್ಗದರ್ಶಿಯೂ ಮೌನಕ್ಕೆ ಜಾರಿದ್ದರು.

ಈಗಲೂ ಕಣ್ಣುಮುಚ್ಚಿ ನೆನೆದರೆ, ಪಿಯೊಪಿಯೊತಾಹಿ ಧುತ್ತನೆ ಎದುರು ಬಂದು ಆಹ್ಲಾದ ಸೃಷ್ಟಿಸುತ್ತದೆ. ಅದರ ಚೆಲುವು, ಗಾಂಭೀರ್ಯ, ರಮಣೀಯತೆ, ಪ್ರಶಾಂತತೆಯ ತರಂಗಗಳು ಇಂದಿಗೂ ನಮ್ಮೆದೆಗಳನ್ನು ಮೀಟುತ್ತಲೇ ಇವೆ.

ಧನ್ಯರಾದೆವು ಹೇ ಬುವಿಯೇ, ಧನ್ಯವಾದ ನಿನಗೆ. ■